# ಚತುರ ಭೀಮ

■ ಶಶಿರೇಖಾ ನಾಗೇಂದ್ರ
ಕಲೆ: ಸಂತೋಷ್ ಸಸಿಹಿತ್ಲು

ಗಾಳಿಪುರದ ಮಹಾದೇವ–ನಂಜಮ್ಮ ದಂಪತಿಗೆ ಭೀಮ, ಸೋಮ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ವ್ಯವಸಾಯವೇ ಅವರ ಕಸುಬು. ಮಹಾದೇವ ಮಂಕ, ಚುರುಕಿರಲಿಲ್ಲ ಇದನ್ನು ಅಕ್ಕಪಕ್ಕದವರು ಹಾಗೂ ನೆಂಟರು ಚೆನ್ನಾಗಿ ಬಳಸಿಕೊಳ್ಳುತ್ತಿದ್ದರು. ಭೀಮ ಚಾಲಾಕಿ ಯಾರನ್ನ ಹೇಗೆ ಹೊಡೀಬೇಕು ಅಂತ ತಿಳಿದಿದ್ದ. ತಮ್ಮ ಸೋಮನನ್ನು ಸೇರಿಸಿಕೊಂಡು ವ್ಯವಸಾಯ ಮಾಡುತಿದ್ದ. ಬೆಳೆದ ಬೆಳೆಯನ್ನು ಮಾರುವಾಗಲೂ ದಲ್ಲಾಳಿಯ ಕೈಗೆ ಸಿಗುತ್ತಿರಲಿಲ್ಲ. ಅಣ್ಣ ತಮ್ಮ ಇಬ್ಬರು ಬೆಳಿಗ್ಗೆ ಜಮೀನಿನ ಕಡೆಗೆ ಹೋದರೆ ರಾತ್ರಿಗೆ ಮನೆಗೆ ಬರುತ್ತಿದ್ದರು. ಅವರು ಮನೆಯಲ್ಲಿ ಇರದಿದ್ದಾಗ ಅಕ್ಕಪಕ್ಕದವರು ಮಹಾದೇವನಿಗೆ ಏನೇನೋ ಹೇಳಿ ಅವನಿಂದ ದವಸ ಧಾನ್ಯ ಪಡೆಯುತ್ತಿದ್ದರು. ಒಂದು ಸಲ ಹಸುವನ್ನು ಮಾರಲು ಮಹಾದೇವ ಸಂತೆಗೆ ಹೊಡೆದುಕೊಂಡು ಹೊರಟನು. ಇದನ್ನು ನೋಡಿದ ಇವನ ಮೂವರು ಗೆಳೆಯರು ಮಹಾದೇವ, 'ಹಸ ಮಾರಕೆ ಹೋಯಿತ್ತವ್ನೇ ನಾವೇ ಏನಾರ ಪಿತೂರಿ ಮಾಡಿ ಹಸವ ಹೊಡೆದುಕೊಳ್ಳುವ' ಎಂದು ಮಾತಾಡಿಕೊಂಡರು.

ಒಬ್ಬ ಗೆಳೆಯ ಮಹಾದೇವನ ಬಳಿ ಬಂದು 'ಮಾದೇವಾ, ಕುರಿನಾ ಮಾರಕೆ ಒಯಿತಿದಿಯಾ? ಏನು ಬೆಲೆ?' ಎಂದ. 'ಲೋ ಸಂಕರ ನಿಂಗೆ ಕಣ್ಣಿಲ್ಲವಾ? ಹಸ ಕಣ್ಣೆದುರು ಇರುವಾಗ ಕುರಿ ಅನ್ನುತ್ತಿಯಾ? ಮಂಕ' ಎಂದ ಕೋಪದಿಂದ. ಸಂಕರ ಮುಖ ಸೊಟ್ಟಗೆ ಮಾಡಿ ಅಯ್ಯೋ! ಪಾಪಾ! ನೀನು ನಿದ್ದೆಗಣ್ಣಲ್ಲಿದ್ದೀಯಾ? ಈ ಕುರಿಯನ್ನ ಸಂತೆಗಂಟ ಯಾಕೆ ಯಳೆದುಕೊಂಡು ಹೊಯಿತ್ತೀ? ನಲವತ್ತು ರೂಪಾಯಿಗೆ ನನಗೆ ಕೊಟ್ಟುಬಿಡು' ಎಂದ.

ಮಹಾದೇವ ಹೋಗ್ಲಾ ಕೇಮೆ ನೋಡು ಎಂದು ಮುಂದೆ ನಡೆದ. ಹಸಾಗೆ ನೀರು ಕುಡಿಸಲು ಕೆರೆ ತಾವ ಬಂದವನಿಗೆ ಮತ್ತೊಬ್ಬ ಗೆಳೆಯ ಹುಚ್ಚಪ್ಪ ಬಂದು 'ಏನಪ್ಪ ದೂರ ಪ್ರಯಾಣವೋ?' ಎಂದು ಮಾತಾಡಿಸಿದ. 'ಸಂತೆಗೆ ಹೋಯಿತ್ತಿದಿನಿ, ಹಸನ ಮಾರಕೆ' ಎಂದ. 'ಮೂವತ್ತೈದು ರೂಪಾಯಿಗೆ ನನಗೆ ಕೊಡು ನೀನು ಸಂತೆಗಂಟ ಹೋದರು ಅಷ್ಟು ದುಡ್ಡೇ ಸಿಗದು ಈ ಕುರಿಗೆ' ಎಂದ. 'ನಿನ್ನ ಬುದ್ಧಿಯೇನು ಲದ್ದಿ ತಿನ್ನಕೆ ಹೋಗದ? ಕಾಮಧೇನು ಹಸುನಾ ಕುರಿ ಬೆಲೆಗೆ ಕೇಳಿತಿದಿಯಾ?' ಎಂದ. 'ಆ ಏನಂದೆ ಇದು ಹಸನಾ? ಕುರಿನ ಹಸ ಅಂತಿಯಲ್ಲ? ನಿನಗೇನೂ ಆಗದೆ ಬುಡು' ಎಂದ. ಮತ್ತೇ ಸ್ವಲ್ಪ ದೂರ ಹೋದ.

ಮೇಲೆ ಮೂರನೇ ಗೆಳೆಯ ವೆಂಕಟ ಬಂದು 'ಏನು ಮೂವರು ಕುರಿ ಮಾರಕ್ಕೆ ಹೋಯಿತಿದಿರ' ಎಂದ.

'ಲೋ ವೆಂಕಿ, ನನ್ನ ಹಸನಾ ಕುರಿ ಅನ್ನುತ್ತಿಯಾ?' ಎಂದವ ಮನದಲ್ಲೇ ಈ ಮೂವರು ಕುರಿ ಅನುತವ್ರೇ, ಇದು ಕುರಿನೇ ಇರಬೇಕು ನಾನು ಕುರಿನಾ ಹಸ ಅಂದುಕೊಂಡೆನಾ ಎಂದು ಸುಮ್ಮನೆ ನಿಂತ.

ವೆಂಕಟ 'ಮೂವತ್ತು ರೂಪಾಯಿ ಕೊಡುತ್ತೀನಿ' ನಂಗೆ ಕೊಡು' ಎಂದ. ಅದು ಜಾಸ್ತಿನೆ ನೀನು ಸಂತೆಗಂಟ ಹೋಗಬೇಕಲ್ಲಾಂತ ಹೇಳುತ್ತಿದಿನಿ ಅಂದ. ಮಹಾದೇವ ಮೂವತ್ತು ರೂಪಾಯಿಗೆ ಹಸುವನ್ನು ಅವರಿಗೆ ಕೊಟ್ಟು ಮನೆಗೆ ಬಂದು ನಡೆದ ಸಂಗತಿಯನ್ನು ಮಕ್ಕಳಿಗೆ ಹೇಳಿದ. ಭೀಮ, ಸರಿ ಅಪ್ಪಾ ಮುಂದಿನದ್ದು ನಾನು ನೋಡಿಕೊಳ್ಳುತ್ತೇನೆ ಎಂದ. ಭೀಮ ಒಂದೇ ಥರದ ಎರಡು ಬೆಕ್ಕಿನ ಮರಿಯನ್ನು ತಂದು ಎರಡು ಬುಟ್ಟಿಯಲ್ಲಿಟ್ಟನು. ಅಮ್ಮನಿಗೆ 'ಇವತ್ತು ಅಪ್ಪನ ಸ್ನೇಹಿತರು ಮೂವರು ಊಟಕ್ಕೆ ಬರುತ್ತಾರೆ. ಮುದ್ದೆ ಬಸ್ಸಾರು, ಒಬ್ಬಟ್ಟು, ಕೀರು, ಒತ್ತುಶಾವಿಗೆ, ವಡೆ, ಚಿತ್ರಾನ್ನ ಮಾಡು, ನಾನು ಮನೆಗೆ ಬಂದು ಏನು ಅಡುಗೆ ಮಾಡಿದಿಯಾ ಅಮ್ಮ ಎನ್ನುತ್ತೇನೆ, ಬೆಕ್ಕು ಬಂದು ಹೇಳಿದಂತೆ ಮಾಡಿದ್ದೇನೆ' ಎಂದು ಹೇಳು' ಎಂದನು. ಭೀಮ ಬುಟ್ಟಿಯಲ್ಲಿ ಬೆಕ್ಕಿನ ಮರಿಯನ್ನು ಹಾಕಿ ಬುಟ್ಟಿಯನ್ನು ಎತ್ತಿಕೊಂಡು ಮೂವರು ಗೆಳೆಯರಿದ್ದ ಕಡೆ ಬಂದ. ಭೀಮನನ್ನು ನೋಡಿ ಅವರು 'ಏನು ಭೀಮ, ನಿಮ್ಮ ಪೆದ್ದ ಅಪ್ಪನಿಗೆ ಹಸ ಯಾವುದು ಕುರಿ ಯಾವುದು ತಿಳಿಯಕ್ಕಿಲ್ಲ ಎಂದು ನಗತೊಡಗಿದರು. 'ನಮ್ಮಪ್ಪನಿಗೆ ಅಷ್ಟು ತಿಳಿವಳಿಕೆಯಿಲ್ಲ, ಆದ್ರೇ ನಮ್ಮಮ್ಮನ ಜೊತೆ ಸೇರಿಕೊಂಡು ಸಖತ್ತಾಗಿ ಅಡುಗೆ ಮಾಡುತ್ತಾನೆ' ಎಂದ.

'ಏನು ಬುರುಡೆ ಬಿಡುತ್ತಿದೀಯಾ?' ಎಂದ ವೆಂಕಟ. ಭೀಮ, ಸರಿ ಇವತ್ತು ಏನು ಅಡುಗೆ ಮಾಡಿಸೋಣ? ಹೇಳಿ ಎಂದ. ಮೂವರು

